ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಹೊಸ ಪ್ರಯತ್ನ

ಹಸಿರು ಬೆಂಗಳೂರಿಗೆ 'ನಗರ ತೋಟಗಾರಿಕೆ' ಉಸಿರು

• ಗಾಣಧಾಳು ಶ್ರೀಕಂಠ

ಬೆಂಗಳೂರು: ರಸ್ತೆ ಬದಿಯಲ್ಲಿ ಗಿಡಗಳನ್ನು ನೆಟ್ಟು ಬೆಂಗಳೂರನ್ನು ಹಸಿರಾಗಿಸುವ ಪ್ರಯತ್ನ ನಿರಂತರವಾಗಿದೆ. ಈಗ ಅದಕ್ಕೆ ಬೆಂಬಲವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ 'ನಗರ ತೋಟಗಾರಿಕೆ' ಮೂಲಕ ನಗರದ ಮನೆ ಮನೆಯಲ್ಲಿ ಹಸಿರು ಬೆಳೆಸಲು ನಾಗರಿಕರನ್ನು ಅಣಿಗೊಳಿಸುವ ಕೆಲಸಕ್ಕೆ ಮುಂದಾಗಿದೆ.

ಮನೆ ಅಂಗಳದಲ್ಲಿ, ತಾರಸಿಯಲ್ಲಿ, ಖಾಲಿ ನಿವೇಶನಗಳಲ್ಲಿ ಕೈ ತೋಟಗಳ ನಿರ್ಮಾಣಕ್ಕಾಗಿ ಕೃಷಿ ವಿಶ್ವವಿದ್ಯಾಲಯ ಎರಡು ದಿನಗಳ ಅಲ್ಪಾವಧಿ ಕೋರ್ಸ್ (ತರಬೇತಿ) ಆರಂಭಿಸಿದೆ. ಇದರ ಭಾಗವಾಗಿ ಕಳೆದ ತಿಂಗಳು ಕಾರ್ಯಾಗಾರವನ್ನು ಆಯೋಜಿಸಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಯಿತು. ಈ ಕಾರಣದಿಂದ ಕೃಷಿ ವಿಶ್ವವಿದ್ಯಾಲಯ ವರ್ಷಕ್ಕೊಮ್ಮೆ ಆಯೋಜಿಸುತ್ತಿದ್ದ 'ನಗರ ತೋಟಗಾರಿಕೆ' ತರಬೇತಿಯನ್ನು ಈಗ ತಿಂಗಳಿಗೊಮ್ಮೆ ಆಯೋಜಿಸಲು ಯೋಜನೆ ರೂಪಿಸಿದೆ.

ನಗರ ನಿವಾಸಿಗಳು ಇರುವಷ್ಟೇ ಜಾಗದಲ್ಲಿ ಮನೆಗಾಗುವಷ್ಟು ತರಕಾರಿ, ಹಣ್ಣು, ಹೂವು ಬೆಳೆದುಕೊಳ್ಳಲು ಆರಂಭಿಸಿದರೆ, ನಗರದ ಮನೆ ಮನೆಯೂ ಹಸಿರಾಗುತ್ತದೆ. ಹಸಿರು ಬೆಳೆಸಿದವರಿಗೆ ಪೌಷ್ಟಿಕ ಆಹಾರವೂ ಲಭ್ಯವಾಗುತ್ತದೆ. ಹೀಗಾಗಿ, ಕೃಷಿ ವಿಶ್ವವಿದ್ಯಾಲಯದ 'ನಗರ ತೋಟಗಾರಿಕೆ' ಪರಿಕಲ್ಪನೆಯ ಹಿಂದೆ ಬೆಂಗಳೂರನ್ನು ಹಸಿರಾಗಿಸುವ ಜತೆಗೆ ನಗರವಾಸಿಗಳ ಆರೋಗ್ಯದ ಕಾಳಜಿಯೂ ಇದೆ.



ಸಾಂದರ್ಭಿಕ ಚಿತ್ರ

ತರಬೇತಿಯ ಪರಿಕಲ್ಪನೆ: ಮನೆಯಲ್ಲಿ ಒಣ ಮತ್ತು ಹಸಿ ತ್ಯಾಜ್ಯವನ್ನು ಗೊಬ್ಬರವಾಗಿಸುವುದು, ಬೀಜದಿಂದ ಗಿಡ ಬೆಳೆಸುವುದು, ಗೊಬ್ಬರ ಬೆರೆಸಿ ಮಣ್ಣನ್ನು ಹದಗೊಳಿಸುವುದು. ಕುಂಡಗಳಲ್ಲಿ ಗಿಡಗಳನ್ನು ನೆಟ್ಟು ಆರೈಕೆ ಮಾಡುವುದು, ತಾರಸಿ ತೋಟ, ಲಂಬ ತೋಟಗಾರಿಕೆ (ವರ್ಟಿಕಲ್ ಗಾರ್ಡನಿಂಗ್), ಒಳಾಂಗಣ ಸಸ್ಯಗಳನ್ನು ಬೆಳೆಸುವುದು, ಸಸ್ಯ ರೋಗಗಳು/ಕೀಟ ಬಾಧೆ ನಿರ್ವಹಣೆಯ ಸಾಮಾನ್ಯ ಅಂಶಗಳ ಬಗ್ಗೆ ಮಾಹಿತಿ ನೀಡುವುದು ಸೇರಿದಂತೆ ವಿವಿಧ ಆಯಾಮಗಳಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ಅವರು ಕಲಿಕಾ ವಿಧಾನವನ್ನು ವಿವರಿಸಿದರು.

'ತರಬೇತಿಯಲ್ಲಿ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಲಾಗುತ್ತದೆ. ಪಾಲ್ಗೊಂಡವರು ತರಬೇತಿ ನಂತರವೂ ವಿಶ್ವವಿದ್ಯಾಲಯದ ಸಂಪರ್ಕದಲ್ಲಿದ್ದು ಮಾಹಿತಿ ಪಡೆಯಬಹುದು. ತರಬೇತಿಯಲ್ಲಿ ಭಾಗವಹಿಸುವವರಿಗೆ ಹಣ್ಣು, ತರಕಾರಿ, ಹೂವಿನ ಬೀಜಗಳು, ಕೈತೋಟ ಕುರಿತ ಮಾಹಿತಿ ಪತ್ರವನ್ನೊಳಗೊಂಡ ಕಿಟ್ ನೀಡಲಾಗುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ತಜ್ಞರು ಮಾಹಿತಿ ನೀಡಿದರು.

ಯಾರೆಲ್ಲ ತರಬೇತಿ ಪಡೆಯಬಹುದು?: 'ಕಡಿಮೆ ಜಾಗ ಇದೆ, ತೋಟ ಮಾಡುವುದು ಹೇಗೆ' ಎಂದು ಚಿಂತಿಸುತ್ತಿರುವವರು, 'ಮನೆಯೊಳಗೆ ಎಂಥಹ ಅಲಂಕಾರಿಕ ಸಸ್ಯಗಳನ್ನು ಬೆಳೆಸಬೇಕು' ಎಂದು ಯೋಚಿಸುತ್ತಿರುವವರು, ಅಪಾರ್ಟ್‌ಮೆಂಟ್‌ಗಳಲ್ಲಿರುವ ತರದ ಸ್ಥಳಗಳಲ್ಲಿ ತೋಟ ಮಾಡಲು ಬಯಸುವವರು.. ಒಟ್ಟಾರೆ, ಕೈತೋಟ ಮಾಡಲು ಉತ್ಸಾಹ, ಆಸಕ್ತಿ ಇರುವ ಎಲ್ಲ 'ಹಸಿರು ಪ್ರೀತಿಯ' ಮನಸ್ಸಿನವರೂ ನಗರ ತೋಟಗಾರಿಕೆ ತರಬೇತಿಯಲ್ಲಿ ಭಾಗವಹಿಸಬಹುದು.

'ಎರಡು ದಿನಗಳ ತರಬೇತಿಗೆ ₹1,770 ಶುಲ್ಕ ನಿಗದಿಪಡಿಸಿದೆ. ಈ ಶುಲ್ಕದಲ್ಲಿ ಊಟ, ಟೀ, ಲಘು ಉಪಹಾರದ ಜೊತೆಗೆ, ಮಾಹಿತಿ ಪತ್ರವನ್ನೊಳಗೊಂಡ ಕಿಟ್ ಕೂಡ ಸೇರುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದ ಸಿಬ್ಬಂದಿ ಮಾಹಿತಿ ನೀಡಿದರು.



ಜೆಕೆವಿಕೆಯ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ ನಡೆದ 'ನಗರ ತೋಟಗಾರಿಕೆ ತರಬೇತಿ'

'ಜನರ ಉತ್ಸಾಹವೇ ಪ್ರೇರಣೆ'

ಪ್ರತಿ ವರ್ಷ ಕೃಷಿ ಮೇಳಕ್ಕೆ ಹೆಚ್ಚು ನಗರವಾಸಿಗಳು ಭೇಟಿ ನೀಡುತ್ತಿದ್ದು, ಕೈತೋಟ ನಿರ್ಮಾಣ ಕುರಿತು ಆಸಕ್ತಿ ತೋರುತ್ತಿದ್ದರು. ನಮ್ಮ ತಜ್ಞರು ಆವರಿಗೆ ನಗರ ತೋಟಗಾರಿಕೆ ಪರಿಕಲ್ಪನೆ ಪರಿಚಯಿಸುತ್ತಿದ್ದರು. ಈಗ ಅದನ್ನು ಇನ್ನಷ್ಟು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿದ್ದೇವೆ.

ಎಸ್.ವಿ.ಸುರೇಶ್, ಕುಲಪತಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಜೂನ್ 25-26 ರಂದು ಕಾರ್ಯಾಗಾರ

'ನಗರ ತೋಟಗಾರಿಕೆ' ಕುರಿತ ಮುಂದಿನ ಕಾರ್ಯಾಗಾರ ಜೂನ್ 25 ಮತ್ತು 26ರಂದು ನಿಗದಿಯಾಗಿದೆ. ಆಸಕ್ತರು ಜೂನ್ 16ರೊಳಗೆ ಹೆಸರು ನೋಂದಾಯಿಸಬೇಕು. 30 ಜನರಿಗೆ ಮಾತ್ರ ಅವಕಾಶ. ಮೊದಲು ಬಂದವರಿಗೆ ಆದ್ಯತೆ. ನೋಂದಣಿಗಾಗಿ ಮೊಬೈಲ್ ಸಂಖ್ಯೆ 6360466004/9481735592 ಸಂಪರ್ಕಿಸಬಹುದು ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ತಿಳಿಸಿದೆ.



ಇತ್ತೀಚೆಗೆ ಜೆಕೆವಿಕೆಯಲ್ಲಿ ನಡೆದ 'ನಗರ ತೋಟಗಾರಿಕೆ' ಕಾರ್ಯಾಗಾರದಲ್ಲಿ ಗಿಡ ನೆಡಲು ಕುಂಡಗಳನ್ನು ಸಿದ್ಧತೆ ಮಾಡಿಕೊಳ್ಳುವ ಪ್ರಾತ್ಯಕ್ಷಿಕೆ ಪ್ರದರ್ಶನ.

'ನಗರ ತೋಟಗಾರಿಕೆ' ಪ್ರಯೋಜನಗಳು

'ನಗರ ತೋಟಗಾರಿಕೆ'ಯಿಂದ ಹಣ್ಣು ತರಕಾರಿಗಳನ್ನು ಬೆಳೆಯುವ ಜೊತೆಗೆ ಬೆಂಗಳೂರನ್ನು ಸ್ವಚ್ಛವಾಗಿಸುವ, ಹಸಿರಾಗಿಸುವ ಪ್ರಯತ್ನಗಳಿಗೂ ಕೈ ಜೋಡಿಸಬಹುದು' ಎನ್ನುತ್ತಾರೆ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್.

'ನಗರದಲ್ಲಿ ಕಸದ ಸಮಸ್ಯೆ ಹೆಚ್ಚಿದೆ. ಮನೆಯಲ್ಲೇ ಒಣ-ಹಸಿ ಕಸ ಬೇರ್ಪಡಿಸಿ, ಕಾಂಪೋಸ್ಟ್ ಮಾಡಿ, ಗಿಡಗಳಿಗೆ ಬಳಸಿದರೆ, ಬಿಬಿಎಂಪಿ ಮೇಲಿನ ಹೊರೆ ತುಸು ಕಡಿಮೆಯಾಗುತ್ತದೆ. ಇದು 'ಸ್ವಚ್ಛ ಬೆಂಗಳೂರು' ಪ್ರಯತ್ನಕ್ಕೆ ಸಣ್ಣದೊಂದು ಕೊಡುಗೆಯಾಗುತ್ತದೆ' ಎಂದು ಅವರು ವಿವರಿಸಿದರು. 'ನಗರ ಪ್ರದೇಶದ ಅನೇಕ ಮಕ್ಕಳಿಗೆ ತಾವು ಉಣ್ಣುವ ಆಹಾರ ಎಲ್ಲಿಂದ ಬರುತ್ತದೆ ಎಂದು ಗೊತ್ತಿರುವುದಿಲ್ಲ. ತರಗತಿಗಳಲ್ಲಿ ಪಠ್ಯದ ಮೂಲಕ ಮಾಹಿತಿ ಪಡೆದರಬಹುದೇ ಹೊರತು ಪ್ರಾಯೋಗಿಕ ಮಾಹಿತಿ ಕಡಿಮೆ. ಮನೆಯಲ್ಲಿ ಕೈತೋಟ ಬೆಳೆಸುವುದರಿಂದ ಮಕ್ಕಳಿಗೆ ಸಸ್ಯ ಪ್ರಪಂಚದ ಜೊತೆಗೆ, ಕೃಷಿಯ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಬಹುದು' ಎನ್ನುತ್ತಾರೆ ಅವರು.

Prajavani pg 04

ರಾಯಚೂರು ಕೃಷಿ ವಿವಿ ಘಟಿಕೋತ್ಸವ | ವರ್ಚುವಲ್‌ನಲ್ಲಿ ರಾಜ್ಯಪಾಲರು ಭಾಗಿ

ವಿಷಮುಕ್ತ ಕೃಷಿಗೆ ಉತ್ತೇಜನ

• ರಾಯಚೂರು: ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಹೆಚ್ಚು ರಾಸಾಯನಿಕ ಹಾಗೂ ಕ್ರಿಮಿನಾಶಕ ಬಳಕೆಯಿಂದ ಭೂಮಿ, ವಾಯು, ನೀರು ಹಾಗೂ ಆಹಾರ ವಿಷಮಯವಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಸಾಂಪ್ರದಾಯಿಕ ಕೃಷಿಯೊಂದಿಗೆ ನೂತನ ತಂತ್ರಜ್ಞಾನ ಅಳವಡಿಕೆಯ ಕೃಷಿಯತ್ತ ರೈತರನ್ನು ಆಕರ್ಷಿಸುವುದಕ್ಕೆ ಕೃಷಿ ವಿದ್ಯಾರ್ಥಿಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ಬಳ್ಳಾರಿಯಜಿಂದಾಲದಿಂದ ವರ್ಚುವಲ್ ಮೂಲಕ ಭಾಗವಹಿಸಿ ಮಾತನಾಡಿ, ಭಾರತವನ್ನು ಆಹಾರ ಮತ್ತು ಕೃಷಿ ಉತ್ಪಾದನೆಯ ಜೊತೆಗೆ ತಂತ್ರಜ್ಞಾನ, ನಾವೀನ್ಯತೆ ಮತ್ತು ನೈತಿಕತೆಯ ಜಾಗತಿಕ ಕೇಂದ್ರವನ್ನಾಗಿ ಮಾಡುವತ್ತ ಕೃಷಿ ವಿದ್ಯಾರ್ಥಿಗಳು ಗಮನಕೊಡಬೇಕು ಎಂದರು.

ಕೃಷಿ ಆಧಾರಿತ ನವೋದ್ಯಮಗಳು ಭಾರತೀಯ ಆರ್ಥಿಕತೆಯಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿವೆ. ಇಂದು ಭಾರತದ ಆರ್ಥಿಕತೆಯು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, ಕೃಷಿ ವಲಯವು ಅದರಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಮೇಲಿನ ರೈತರ ಅವಲಂಬನೆಯನ್ನು ಕಡಿಮೆ ಮಾಡುವ ಅವಶ್ಯಕತೆಯಿದೆ. ಕಲುಷಿತ ಆಹಾರ ಬಳಕೆಯಿಂದ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸಾವಯವ ಕೃಷಿ, ನೈಸರ್ಗಿಕ ಕೃಷಿ, ಕಡಿಮೆ ನೀರಿನಿಂದ ಹೆಚ್ಚಿನ ಇಳುವರಿ ಪಡೆಯುವುದು ಮತ್ತು ಸುರಕ್ಷಿತ ಆಹಾರವನ್ನು ಉತ್ಪಾದಿಸಲು ಪರಿಸರ ಸ್ನೇಹಿ ಕೃಷಿಯಂತಹ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಕಡೆಗೆ ನಾವು ಹೆಚ್ಚು ಶ್ರಮಿಸಬೇಕಾಗಿದೆ ಎಂದು ತಿಳಿಸಿದರು.

ಸಾಂಪ್ರದಾಯಿಕ ಕೃಷಿಯಿಂದ ಕೃಷಿ ಉತ್ಪಾದನೆಯು ಶುದ್ಧವಾಗಿರುತ್ತದೆ ಮತ್ತು ಉತ್ಪಾದನೆ ಹೆಚ್ಚಾಗುತ್ತದೆ. ಇದು ಪರಿಸರ ಸಂರಕ್ಷಣೆಗೂ ಸಹಾಯ ಮಾಡುತ್ತದೆ ಎಂದರು. ಪ್ರಸ್ತುತ ಜಾಗತಿಕ ತಾಪಮಾನ ಏರಿಕೆ, ನೀರಿನ ಬಿಕ್ಕಟ್ಟು, ಮಣ್ಣಿನ ಸವೆತ, ಅತಿಯಾದ ಕೀಟನಾಶಕಗಳ ಬಳಕೆ ಮತ್ತು ರೈತರ ಆರ್ಥಿಕ ತೊಂದರೆಗಳಂತಹ ಸವಾಲುಗಳನ್ನು ಎದುರಿಸುತ್ತಿದ್ದೇವೆ.



ಹವಾಮಾನ ವೈಪರೀತ್ಯ: ದೊರೆಯದ ಕ್ಲಿಯರನ್ಸ್

• ಸಂಡೂರು (ಬಳ್ಳಾರಿ): ರಾಯಚೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮಕ್ಕೆ ತೆರಳಬೇಕಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು, ಹೆಲಿಕ್ಯಾಪ್ಟರ್ ಕ್ಲಿಯರನ್ಸ್ ದೊರೆಯದ ಹಿನ್ನೆಲೆ ಇಲ್ಲಿನ ಜಿಂದಾಲ್ ವಿಮಾನ ನಿಲ್ದಾಣದಲ್ಲೇ ಸೋಮವಾರ ವರ್ಚುವಲ್ ಮೂಲಕ ಘಟಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

Hosadiganta pg 04

20,900 ರೂ.ಗೆ ಕ್ವಿಂಟಾಲ್ ಕೊಬ್ಬರಿ ಟೆಂಡರ್ | ತೆಂಗು ಬೆಳೆಗಾರರ ಮೊಗದಲ್ಲಿ ಮಂದಹಾಸ

ಐತಿಹಾಸಿಕ ದಾಖಲೆ ಬರೆದ ತಿಪಟೂರು ಉಂಡೆ ಕೊಬ್ಬರಿ

ಎಚ್.ಬಿ.ಸುಪ್ರತೀಕ್ ಹಳೇಮನೆ

ತುಮಕೂರು: ಕೊಬ್ಬರಿಯ ಕಣಜ ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಉಂಡೆ ಕೊಬ್ಬರಿಯೂ 20 ಸಾವಿರ ಗಡಿ ದಾಟಿ ಐತಿಹಾಸಿಕ ಬೆಲೆ ದಾಖಲಿಸಿದ್ದು, ರೈತರು ಸಂತಸಗೊಂಡಿದ್ದಾರೆ.

ಕಳೆದ ಎರಡು-ಮೂರು ವರ್ಷಗಳಿಂದಲೂ ಕುಸಿತ ಕಂಡಿದ್ದ ಉಂಡೆ ಕೊಬ್ಬರಿ ಕ್ವಿಂಟಾಲ್‌ಗೆ 8 ಸಾವಿರ ರೂ.ಗಳಿಗೆ ತಲುಪಿ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿತ್ತು. ತದ ನಂತರ 2024ರ ಮಧ್ಯ ಭಾಗದಿಂದ ಸ್ವಲ್ಪ ಚೇತರಿಕೆ ಕಂಡಿದ್ದ ಕೊಬ್ಬರಿ ಬೆಲೆ ಕಳೆದ ಗುರುವಾರ ಕ್ವಿಂಟಾಲ್‌ಗೆ 19,566 ರೂ.ಗಳಿಗೆ ಟೆಂಡರ್ ಆಗುವ ಮೂಲಕ ತೆಂಗು ಬೆಳೆಗಾರರ ಮೊಗದಲ್ಲಿ ಮಂದಹಾಸಕ್ಕೆ ಕಾರಣವಾಗಿತ್ತು. ಸೋಮವಾರದಂದು ಕ್ವಿಂಟಾಲ್ ಕೊಬ್ಬರಿ 20,900 ರೂ.ಗಳಿಗೆ ಟೆಂಡರ್ ಆಗಿದ್ದು ಐತಿಹಾಸಿಕ ದಾಖಲೆ ಬೆಲೆಯನ್ನು ದಾಖಲಿಸಿದೆ.

ತಿಪಟೂರು ತೆಂಗಿನ ನಾಡಾಗಿದ್ದು, ಸ್ಥಳೀಯ ತೆಂಗು ಬೆಳೆಗಾರರು ಕೊಬ್ಬರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಾರೆ.



ತಿಪಟೂರು ಸುತ್ತಮುತ್ತಲಿನ ಕೊಬ್ಬರಿಯಲ್ಲಿ ಸಿಹ ಅಂಶವೂ ಇರುವುದರಿಂದ ದೇಶ-ವಿದೇಶಗಳಲ್ಲಿ ಬೇಡಿಕೆಯನ್ನು ಪಡೆದುಕೊಂಡಿದೆ. ಉತ್ತರ ಭಾರತ ಸೇರಿದಂತೆ ಹೊರ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ, ಮಧ್ಯಪ್ರದೇಶಗಳಿಗೆ ಇಲ್ಲಿಂದಲೇ ನೇರವಾಗಿ ಕೊಬ್ಬರಿ ರವಾನೆಯಾಗುತ್ತದೆ. ಅಲ್ಲಿನ ಜನರು ಇದನ್ನು ವಿವಿಧ ಬಗೆಗಳಲ್ಲಿ ಬಳಸಿಕೊಳ್ಳುತ್ತಾರೆ.

ಕಳೆದ 2 ವರ್ಷಗಳಿಂದಲೂ ತೆಂಗಿನ ಬೆಳೆಯೂ ಕಡಿಮೆ ಆದ ಹಿನ್ನೆಲೆ ಕೊಬ್ಬರಿ ದಾಸ್ತಾನು ಕಡಿಮೆ ಆಗಿದೆ. ಇತ್ತೀಚೆಗೆ ರೈತರು ಕೊಬ್ಬರಿ ಬೆಲೆಯಲ್ಲಿ ಸ್ಥಿರತೆ ಕಾಣದ ಹಿನ್ನೆಲೆಯಲ್ಲಿ ತೆಂಗಿನಕಾಯಿ ಹಾಗೂ ಎಳನೀರಿನ ಮಾರಾಟಕ್ಕೆ ಮುಂದಾಗಿರುವುದು ಕೊಬ್ಬರಿ ಉತ್ಪಾದನೆ ಕಡಿಮೆ ಆಗಲು ಕಾರಣವಾಗಿದೆ. ತೆಂಗಿನ ಮರಗಳಿಗೆ ತಗುಲುತ್ತಿರುವ ವಿಭಿನ್ನ ರೋಗಗಳಿಂದ ತೆಂಗಿನ ಫಸಲು ಕಡಿಮೆಯಾಗಲು ಕಾರಣವಾಗಿದೆ.

ಬೆಲೆ ಏರಿಕೆಗೆ ಕಾರಣಗಳು: ಕೊಬ್ಬರಿ ಬೆಲೆಯಲ್ಲಿ ಏರಿಕೆ ಕಾಣಲು ಬಹು ಮುಖ್ಯವಾದ ಅಂಶವೆಂದರೆ ಹೊರ ರಾಜ್ಯಗಳಲ್ಲಿ ಬೇಡಿಕೆ ಹೆಚ್ಚಾಗಿರುವುದು. ಉತ್ತರ ಭಾರತದಲ್ಲಿ ಶ್ರಾವಣ ಮಾಸದಿಂದ ಪ್ರಾರಂಭವಾಗಿ ದೀಪಾವಳಿಯ ವರೆಗೂ ಆಚರಿಸುವಂತಹ ಎಲ್ಲಾ ಹಬ್ಬಗಳಿಗೂ ಕೊಬ್ಬರಿ ಬೇಡಿಕೆ ಹೆಚ್ಚಾಗಿರುತ್ತದೆ. ಅಲ್ಲದೇ ಮಾರುಕಟ್ಟೆಗೆ ನಿರೀಕ್ಷಿತವಾದ ಉಂಡೆ ಕೊಬ್ಬರಿ ಆಮದು ಇಳಿಕೆಯಲ್ಲಿದೆ. ಗಣನೀಯವಾಗಿ ಎಣ್ಣೆ ಕಾಳುಗಳ ಬೆಲೆಯಲ್ಲಿ ಏರಿಕೆ ಕಂಡ ಹಿನ್ನೆಲೆಯಲ್ಲಿ ಕೊಬ್ಬರಿ ಎಣ್ಣೆ ತಯಾರಿಕೆ, ಬಳಕೆಯಲ್ಲಿ ಹೆಚ್ಚಳವಾಗಿದೆ. ಕೊಬ್ಬರಿ ಬದಲಿಗೆ ಕಾಯಿಯಲ್ಲಿ ಡೆಸಿಕೆಟೆಡ್ ಕೊಕನಟ್ ಪೌಡರ್ (ಕಾಯಿಯ ಒಣ ತುರಿ) ಮಾಡುವವರ ಸಂಖ್ಯೆ ಹೆಚ್ಚಳವಾಗಿರುವುದರಿಂದ ಕೊಬ್ಬರಿ ಅಗತ್ಯಕ್ಕಿಂತ ಕಡಿಮೆ ಮಾರುಕಟ್ಟೆಗೆ ಬರುತ್ತಿರುವುದರಿಂದ ಬೇಡಿಕೆ ಹೆಚ್ಚಳವಾಗಿದೆ.

> **ಕಳೆದ 2-3 ವರ್ಷಗಳ ನಂತರದಲ್ಲಿ ಕೊಬ್ಬರಿ ಬೆಲೆಯಲ್ಲಿ ಏರಿಕೆ ಕಂಡಿರುವುದು ಸಂತಸದ ಸಂಗತಿ. ಸಂಕಷ್ಟದಲ್ಲಿ ಇರುವ ರೈತರಿಗೆ ಆರ್ಥಿಕ ಸದೃಢತೆ ದೊರೆಯಲು ಅನುಕೂಲವಾಗಿದೆ. ಕೊಬ್ಬರಿ ಬೆಲೆಯೂ ಇನ್ನೂ ಕೆಲ ತಿಂಗಳು ಸ್ಥಿರತೆಯಲ್ಲಿದ್ದರೆ ರೈತರಿಗೆ ಅನುಕೂಲವಾಗಲಿದೆ.**
> ತಿಮ್ಲಾಪುರ ದೇವರಾಜು, ಜಿಲ್ಲಾಧ್ಯಕ್ಷ, ಹಸಿರುಸೇನೆ

ಕಳೆದ ಹಲವಾರು ತಿಂಗಳುಗಳಿಂದ ಉಂಡೆ ಕೊಬ್ಬರಿ ಎಪಿಎಂಸಿ ಮಾರುಕಟ್ಟೆಗೆ ಆಮಗನವಾಗುತ್ತಿರುವುದು ಗಣನೀಯವಾಗಿ ಇಳಿಕೆ ಕಂಡಿದೆ. ಅಲ್ಲದೇ ತೆಂಗಿನ ಮರದಲ್ಲಿ ಫಸಲು ಕಡಿಮೆ ಆಗಿರುವ ಬಗ್ಗೆ ರೈತರು ಮಾಹಿತಿ ನೀಡುತ್ತಿದ್ದು, ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಅನುಕೂಲವಾಗಿದೆ. ಮುಂದಿನ ದಿನಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಕೊಬ್ಬರಿಯ ದಾಸ್ತಾನು ಇಲ್ಲದ ಕಾರಣದಿಂದಾಗಿ ಬೆಲೆಯೂ ಏರಿಕೆ ಆಗುವ - ಸ್ಥಿರತೆಯನ್ನು ಕಾಯ್ದುಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿದ್ದು ರೈತರ ಮೊಗದಲ್ಲಿ ಮಂದಹಾಸಕ್ಕೆ ಕಾರಣವಾಗಲಿದೆ.

ಮುಂಗಾರು ಮಳೆಯಿಂದ ಉಳುಮೆ ಕೆಲಸ ಚುರುಕು | ಕೃಷಿ ಕಾರ್ಯದಲ್ಲಿ ಮಳೆ ಆಶ್ರಯ ಪ್ರದೇಶದ ರೈತರು

ಬಿತ್ತನೆ ಬೀಜದ ಜತೆಗೆ ಗೊಬ್ಬರ ಪೂರೈಸಿ

ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಹದವಾದ ಮುಂಗಾರು ಮಳೆಯಿಂದಾಗಿ ರೈತರು ಹೊಲಗದ್ದೆಯನ್ನು ಹದಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಹೊಲಗಳಿಗೆ ಸೂಕ್ತ ಗೊಬ್ಬರ, ಬಿತ್ತನೆ ಬೀಜವನ್ನು ಹದಗೊಳಿಸಿಕೊಂಡು ಬಿತ್ತನೆ ಮಾಡಲು ಹೊಲದ ಕಡೆಗೆ ಹೊರಟಿದ್ದಾರೆ. ಇದರಿಂದಾಗಿನ ಬಹುತೇಕ ಕೃಷಿನ ಕಾರ್ಯ ಚುರುಕುಗೊಂಡಂತಾಗಿದೆ.

ಮಳೆಯಿಂದ ರೈತರ ಮೊಗದಲ್ಲಿ ಹರ್ಷ ತಂದಿದೆ. ಮಳೆ ಈಗಾಗಲೇ ಹೋಬಳಿಯಾದ್ಯಂತ ಹೊಲದಲ್ಲಿ ಗೊಬ್ಬರ ಮಿಶ್ರಿತ ಮಾಡಿ ಹದವಾಗಿ ಉಳುಮೆ ಮಾಡಿ ಮಳೆಗಾಗಿ ಕಾಯುತ್ತಿದ್ದರು. ಇತ್ತೀಚೆಗೆ ಸುರಿದ ಮಳೆಯಿಂದ ಬಿತ್ತನೆ ಮಾಡಲು ಅನುಕೂಲವಾಗಿದೆ.

ಬಿತ್ತನೆ ಕಾರ್ಯ ಭರದಿಂದ ಸಾಗಿದೆ. ನೀರಾವರಿ ಪ್ರದೇಶಕ್ಕಿಂತ ಮಳೆ ಆಶ್ರಿತ ಪ್ರದೇಶದ ಭೂಮಿಯೇ ಹೆಚ್ಚಾಗಿದೆ. ಈ ಭಾರಿ ಮಳೆಯಿಂದ ಕೆರೆ-ಕುಂಟೆಗಳು ತುಂಬದರೂ ಸಹ ಮಳೆ ಆಶ್ರಯ ಬಹುಮುಖ್ಯವಾಗಿದೆ.

ಸಣ್ಣ ಆತಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ತಮ್ಮ ಭೂಮಿಯಲ್ಲಿವ್ಯವಸಾಯ ಮಾಡಲು ವರ್ಷಕ್ಕೊಮ್ಮೆ ಮಳೆಯನ್ನು ನಂಬಿಕೊಂಡು ಬಿತ್ತನೆ ಮಾಡುವರು. ಮಳೆಗಾಲದಲ್ಲಿ ಒಳ್ಳೆಯ ಮಳೆಯಾದರೆ ರೈತರು ರಾಗಿ,ಅವರೇ, ತೊಗರಿ, ಹುರುಳಿ, ಅಲ್ಲಸಂದೆ, ಸಾಮಿ, ಹುಚ್ಚೆಳ್ಳು, ಸಾಸಿವೆ, ಕಾಕಿಜೋಳ ಸೇರಿದಂತೆ ಅನೇಕ ಬೆಳೆಬೆಳೆಯಲು ರೈತರು ಮುಂಗಾರು ಪೂರ್ವ ಮಳೆಯಿಂದ ಸಂತಸಗೊಂಡು ಬಿತ್ತನೆ ಮಾಡಲು ಮುಂದಾಗಿದ್ದಾರೆ.

ವಾರ್ಷಿಕವಾಗಿ ಬೀಳುವ ಮಳೆಯನ್ನು ನಂಬಿಕೊಂಡು



ಹೆಚ್ಚಿನ ಪ್ರಮಾಣದ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಭಾರಿ ಮಳೆ ಚೆನ್ನಾಗಿ ಬರುತ್ತದೆ ಎಂಬ ನಂಬಿಕೆಯಿಂದ ರೈತರು ತಮ್ಮ ಭೂಮಿಯನ್ನು ಹದ ಮಾಡಿಕೊಳ್ಳುವ ಕಾರ್ಯಕ್ಕೆ ಮುಂದಾಗಿದ್ದಾರೆ.

ನೀರಾವರಿ ಪ್ರದೇಶಕ್ಕಿಂತ ಮಳೆ ಆಶ್ರಿತ ಪ್ರದೇಶದಲ್ಲಿ ರಾಗಿ ಹೆಚ್ಚಾಗಿ ಬೆಳೆಯುವ ವಾಡಿಕೆಯಿರುತ್ತದೆ. ಇದರ ಜೊತೆಗೆ ದ್ವಿದಳ ಧಾನ್ಯಗಳು ಸಹ ಬೆಳೆಯುತ್ತಾರೆ. ರೈತರು ಬೆಳೆದ ಬೆಳೆಯನ್ನು ಕಟ್ಟಾವು ಮಾಡಲು ಕೂಲಿ ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದರು. ಈಗ ಕೂಲಿ ಕಾರ್ಮಿಕರು ಸಿಗದ ಕಾರಣ ಯಂತ್ರದ ಮುಖಾಂತರ ತಾವು ಬೆಳೆದ ರಾಗಿ ಬೆಳೆಯನ್ನು ಕಟ್ಟಾವು ಮಾಡಿಸುತ್ತಾರೆ.

ಯಂತ್ರದಲ್ಲಿ ಕಟ್ಟಾವು ಮಾಡುವ ಆಲೋಚನೆಯಿದ್ದರೆ ಅಂತಹ ಜಮೀನುಗಳಲ್ಲಿ ಬರೀ ರಾಗಿ ಬೆಳೆ ಮಾತ್ರ ಬೆಳೆಯುತ್ತಾರೆ. ಇತರ ಯಾವುದೇ ತರಹದ ಮಿಶ್ರಿತ ಬೆಳೆಗಳು ಬೆಳೆಯುವುದಿಲ್ಲ. ಯಂತ್ರಗಳಲ್ಲಿ ಕಟ್ಟಾವು ಮಾಡುವಾಗ ಬೆಳೆದ ಬೆಳೆಯೆಲ್ಲ ಕಟ್ಟಾವು ಆಗುತ್ತದೆ. ಇದರಿಂದ ರೈತರಿಗೆ ಇತರೆ ಬೆಳೆಗಳು ನಾಶವಾಗಿ ನಷ್ಟ ಉಂಟಾಗುತ್ತದೆ. ರೈತರು ಬೆಳೆದ ರಾಗಿಯನ್ನು ಸರ್ಕಾರ ತೆರೆದಿರುವ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಲು ಅನುಕೂಲವಾಗುತ್ತದೆ. ಬೇರೆ ಬೆಳೆ ಮಿಶ್ರಿತವಾದರೆ ಬೇರೆ ಬೇರೆಯಾಗಿ ವಿಂಗಡಿಸಲು ಆಗುವುದಿಲ್ಲ.

ಈಗಾಗಲೇ ಹೊಲದಲ್ಲಿ ಉಳುಮೆ ಮಾಡಿ ಮಳೆಗಾಗಿ ಕಾಯುತ್ತಿದ್ದೆವು. ಮುಂಗಾರು ಪೂರ್ವಮಳೆ ಪ್ರಾರಂಭವಾಗಿ

ರಾಸುಗಳ ಸಾಕುವುದನ್ನೇ ಕೈ ಬಿಟ್ಟ ರೈತರು

ಎತ್ತುಗಳ ಖರೀದಿಗೆ 1.50 ಸಾವಿರ ಬಂಡವಾಳ ಹಾಕಿ ಅದರ ಪೋಷಣೆಗೆ ಖರ್ಚು ಬರುತ್ತದೆಂದು ಕೆಲವು ರೈತರು ರಾಸು ಸಾಕುವುದನ್ನೇ ಕೈ ಬಿಟ್ಟಿದ್ದಾರೆ. ಆದರೆ, ಪ್ರತಿ ವರ್ಷ ನಾವುಗಳು ಎತ್ತುಗಳ ಮುಖಾಂತರ ಉಳುಮೆ ಮಾಡುತ್ತೇವೆ. ಇದರ ಬಗ್ಗೆ ರೈತರು ಅನುಭವ ಪಡೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿಯಾವ ಬೆಳೆ ಬೆಳೆದರೆ ಲಾಭದಾಯಕ ವಾಗಿರುತ್ತದೆಂಬ ಮಾಹಿತಿಯನ್ನು ರೈತರಿಗೆ ತಿಳಿಸಿಕೊಟ್ಟರೆ ಬೆಳೆ ಬೆಳೆಯಲು ಅನುಕೂಲವಾಗುತ್ತದೆಂದು ರೈತ ಎಂ.ಮುದ್ದಪ್ಪ ಸಿ.ಟಿ.ಗೊಲ್ಲಹಳ್ಳಿ ಹೇಳಿದರು.

ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ವಿತರಣೆ

ಈಗಾಗಲೇ ಬಿತ್ತನೆ ಕಾರ್ಯಗಳು ಶುರುವಾಗಿದೆ. ಭೂಮಿ ಉಳುಮೆ ಮಾಡಿ ಹದ ಮಾಡಿಯಿಟ್ಟುಕೊಳ್ಳುವ ಕಾರ್ಯದ ಬಗ್ಗೆ ರೈತರಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ರೈತರುರೈತ ಸಂಪರ್ಕಕೇಂದ್ರಕ್ಕೆ ಬಂದು ಬಿತ್ತನೆ ಬೀಜವನ್ನು ತೆಗೆದುಕೊಳ್ಳಬಹುದೆಂದು ನಂದಗುಡಿ ಹೋಬಳಿಯ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಸುನೀಲ್ ತಿಳಿಸಿದರು.

ಬೀಳುತ್ತಿರುವುದರಿಂದ ಎತ್ತುಗಳಿಂದ ಉಳುಮೆ ಮಾಡಿದರೆ ಭೂಮಿ ಚೆನ್ನಾಗಿ ಹದವಾಗುತ್ತದೆ . ಟ್ರಾ ಕ್ಟರ್‌ಗಳ ಮೂಲಕ ಐದು ಭಾರಿ ಉಳುಮೆ ಮಾಡುವುದು ಎತ್ತುಗಳ ಮುಖಾಂತರಹದ ಮಾಡಿದರೆ ಬಿತ್ತನೆ ಮಾಡಲು ಸಹಾಯವಾಗಿದೆ.

Hosadiganta Pg 08

CONSERVATION

What frogs eat shapes how they coexist, reveals new study

SHANTANU HORNAD
BENGALURU, DHNS

In the rain-drenched evergreen forests of the Western Ghats, two little frogs are offering scientists big insights into how species coexist without stepping on each other's toes.

A new study by ecologists Prof KS Seshadri and Preeti Saryan, published in the *Journal of Natural History*, investigates the diets of two endemic frog species — Micrixalus fuscus and Nyctibatrachus vasanthi — and explores how they share the same habitat while avoiding competition.

Ecological theory suggests that when two species compete for the same resource, they must evolve ways to avoid direct conflict — either by consuming different types of food, being active at different times, or occupying different microhabitats.

Surprisingly, no systematic study had tested these ideas in Indian frogs until now. Most dietary information



Nyctibatrachus vasanthi



Micrixalus fuscus

from the region has been anecdotal or based on limited sampling.

To fill this gap, researchers studied the stomach contents of over 100 frogs from a single stream in Kakachi, near Tirunelveli in Tamil Nadu. Using a non-lethal stomach flushing technique, they collected and analysed over 500 prey items, which included insects, crustaceans, and other arthropods.

Despite similarities in the number and volume of prey consumed, the two species showed distinct dietary preferences.

The diurnal M fuscus — a visual forager with relatively larger eyes — fed mostly on flying insects like flies and wasps. The nocturnal Nyctibatrachus vasanthi, with a flatter body and broader head, specialised in aquatic prey such as amphipods and isopods. These dietary differences closely mirrored their activity periods, habitats, and even head morphology.

The researchers also measured head width, snout length and eye position, finding clear links between these features and the types of prey consumed. Frogs with wider gapes could handle larger or aquatic prey, while those with bigger eyes were more efficient at targeting mobile insects. These findings not only help explain how the two species coexist, but also underscore the importance of understanding dietary ecology in a rapidly changing world. For conservationists, such information is crucial. If amphibians are to be bred in captivity or reintroduced into the wild, knowing what they naturally eat — and why — could be the key to their survival.

While India is still far from integrating dietary data into conservation strategies, this research lays important groundwork. It is a reminder that even basic questions — like what a frog eats — can open doors to deeper ecological understanding and long-term protection of biodiversity.

Dec Hrd Pg 02



According to the sellers, the price of saffron has shot up from ₹250 per gram to ₹450 per gram. FILE PHOTO

Dry fruits, saffron gets expensive in city as arrivals from Kashmir take a hit

Ananya Noone
Eman Syed
BENGALURU

Following the recent terror attack in Pahalgam, the prices of dry fruits and saffron, which are brought in mainly from Kashmir, have increased in Bengaluru.

According to the sellers, the price of walnuts have increased from ₹1,000 per kg to ₹1,500 per kg and almonds have gone up from ₹700 per kg to ₹900 kg. The price of saffron has shot up from ₹250 per gram to ₹450 per gram.

Vinayaka from S. Kumar and Sons in Shivajinagar said, "The dry fruits stopped coming from Kashmir a month ago and the suppliers from Kashmir are not answering calls."

The traders also said that the attack occurred during the important month of Mousam-E-Khazan (season of peak produce), affecting the trade.

President of Cantonment Fruits and Dry Fruits Merchants Association, Mohammed Idrees Choudhury said, "The demand for saffron, especially, has increased due to the reduction in its availability. I am unable to fulfil the orders placed by my regular customers, which include five-star hotels."

"Not just me, but most traders have been forced to use the stock that arrived before the Pahalgam attack," he added.

The price rise has also affected the consumption pattern of customers. Ramesh, a customer of M.S. Stores, Vijayanagar, expressed his concerns regarding the recent surge in saffron prices.

He said that his elderly mother has a habit of adding saffron to her milk daily, now the price rise has put them in a difficult position..

Stocks stuck

Kursheed Ahmed Dar, a Kashmiri dry fruit trader based in Srinagar, said that loads of produce were stuck in Kashmir, without a way to reach Delhi, so it can be distributed to the rest of the country.

Mr. Dar urged the government to resolve the impasse soon and help the locals to make an honest living.

While demand continues to grow across the country, the inability to access markets has left farmers and traders in Jammu and Kashmir in a state of uncertainty.

Mr. Dar lamented it may take several years to recover the losses they have incurred this year.

Hindu Pg 04

ತೋಟಗಾರಿಕಾ ಇಲಾಖೆ ರೈತರಿಗೆ ಪ್ರೋತ್ಸಾಹ ಧನ

ನೆಲಮಂಗಲ: ರಾಷ್ಟ್ರೀಯ ತೋಟಗಾರಿಕೆ ಮಿಷನ್, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನೆಲಮಂಗಲ ತಾಲ್ಲೂಕಿನಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲು ತೋಟಗಾರಿಕಾ ಇಲಾಖೆ ವತಿಯಿಂದ ರೈತರಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ (ಎನ್‌ಹೆಚ್‌ಎಂ) ಹಾಗೂ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ (ಸಿಹೆಚ್‌ಡಿ) ರೈತರು ಬಾಳೆ, ಮಾವು, ಪಪ್ಪಾಯ ಹೈಬ್ರೀಡ್ ತರಕಾರಿ ಮತ್ತು ಹೂವಿನ ಬೆಳೆ ಬೆಳೆಯಬಹುದು. ಹಾಗೂ ರೋಗ ಮತ್ತು ಕೀಟ ನಿಯಂತ್ರಣ, ಪ್ಲಾಸ್ಟಿಕ್ ಹೊದಿಕೆ, ಪ್ರಾಥಮಿಕ ಸಂಸ್ಕರಣ ಘಟಕಗಳು, ಸಂರಕ್ಷಿತ ಬೇಸಾಯ, ವೈಯಕ್ತಿಕ ಕೃಷಿಹೊಂಡ, ಫಾರಂ ಗೇಟ್ ಪ್ಯಾಕ್ ಹೌಸ್ ನಿರ್ಮಾಣ, ಜೇನುಸಾಕಾಣಿಕೆ, ಮೊಬೈಲ್ ವೆಂಡಿಂಗ್ ಕಾರ್ಟ್, ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆಯಡಿ ಹೊಸ ಪ್ರದೇಶ ಕಾರ್ಯಕ್ರಮದಡಿ ದಾಳಿಂಬೆ, ಡ್ರಾಗನ್ ಫ್ರೂಟ್‌ಗಳಿಗೆ ಫಲಾನುಭವಿಗಳು ತೋಟಗಾರಿಕೆ ಇಲಾಖೆಯಿಂದ ಸಹಾಯ ಧನವನ್ನು ಪಡೆದುಕೊಳ್ಳಬಹುದಾಗಿದೆ.

ಅರ್ಜಿಯನ್ನು ಇದೇ 31ರ ಒಳಗಾಗಿ ಅಗತ್ಯ ದಾಖಲೆಗಳೊಂದಿಗೆ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯಕ ತೋಟಗಾರಿಕೆ ನಿರ್ದೇಶಕರು, ನೆಲಮಂಗಲ ತಾಲ್ಲೂಕು ಇವರ ಮೊಬೈಲ್ ಸಂ: 9880461607 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

S-karnataka Pg 04

Copra prices hit all-time high

TIPTUR (TUMAKURU DIST), DHNS: Copra prices jumped over Rs 1,000 per quintal to an all-time high of Rs 20,900 at the Tiptur APMC market on Monday.

High quality copra was sold at Rs 20,900 per quintal while the standard produce fetched Rs 20,500. On March 24, copra prices had reached Rs 19,000 equalling the all-time high recorded in 2014-15.

The prices were hovering around Rs 19,000 in the last two months.

Eco Times Pg 03

ಭಾರತದ ಮಾವಿನ ಹಣ್ಣು ನಮಗೆ ಬೇಡ: ಅಮೆರಿಕ

ರಫ್ತಾದ 17 ಟನ್ ಹಣ್ಣು ತಿರಸ್ಕಾರ

ವಾಷಿಂಗ್ಟನ್: ಅಮೆರಿಕಕ್ಕೆ ಭಾರತದ ಮಾವಿನ ಹಣ್ಣಿನ ರಫ್ತು ತಲುಪಿದ ನಂತರ ಈ ಸರಕನ್ನು ತಿರಸ್ಕರಿಸಲಾಗಿರುವುದರಿಂದ ಮಾವಿನ ಹಣ್ಣಿನ ರಫ್ತುದಾರರು ಭಾರೀ ನಷ್ಟ ಅನುಭವಿಸಿದ್ದಾರೆ.

ಈ ಹಣ್ಣುಗಳನ್ನು ನಾಶ ಮಾಡುತ್ತೇವೆ ಇಲ್ಲದಿದ್ದರೆ ನೀವು ವಾಪಸ್ ಪಡೆದುಕೊಳ್ಳಿ ಎಂದು ಅಮೆರಿಕ ಅಧಿಕಾರಿಗಳು ರಫ್ತುದಾರರಿಗ ಧಮಕಿ ಹಾಕಿದ ನಂತರ ಈ ಹಣ್ಣುಗಳನ್ನು ವಾಪಸ್ ಪಡೆಯುವುದಕ್ಕಿಂತ ಅಲ್ಲೇ ನಾಶ ಮಾಡುವುದಕ್ಕೆ ಒಪ್ಪಿಗೆ ನೀಡಿದರು. ಮಾವಿನ ಹಣ್ಣುಗಳು ಬೇಗನೇ ಹಾಳಾಗುವ ವಸ್ತುವಾಗಿದ್ದು ಅವುಗಳ ಸಾಗಾಟಕ್ಕೂ ಹೆಚ್ಚು ವೆಚ್ಚವಾಗುತ್ತಿರುವುದರಿಂದ ರಫ್ತುದಾರರು ಅಮೆರಿಕಕ್ಕೆ ಸಾಗಿಸಿದ ಹಣ್ಣುಗಳನ್ನು ಹಿಂದಕ್ಕೆ ಪಡೆಯಲು ಆಸಕ್ತಿ ತೋರಿಸಲಿಲ್ಲ. ಈ ರಫ್ತಿನಿಂದಾಗಿ ರಫ್ತುದಾರರು ಸುಮಾರು 4.2 ಕೋಟಿ ರೂ. ನಷ್ಟ ಅನುಭವಿಸಿದ್ದಾರೆ ಎಂದು ಅನಾಮಧೇಯ ಸ್ಥಿತಿಯಲ್ಲಿದ್ದ ರಫ್ತುದಾರರೊಬ್ಬರು ತಿಳಿಸಿದ್ದಾರೆ. ಆದರೆ ಭಾರತದ ತಾಜಾ ತರಕಾರಿಗಳು ಹಾಗೂ ಹಣ್ಣು ಹಂಪಲುಗಳ ರಫ್ತುದಾರರ ಸಂಘವು ಹೇಳುವಂತೆ ಈ ಘಟನೆಯ ನಂತರವೂ ಭಾರತದಿಂದ ಮಾವಿನ ಹಣ್ಣುಗಳ ರಫ್ತು ಮುಂದುವರಿಯುತ್ತದೆ.



ಮುಂಬಯಿಯಿಂದ ರವಾನಿಸಿದ ಭಾರೀ ಪ್ರಮಾಣದ ಮಾವಿನ ಹಣ್ಣುಗಳ ಸರಕು ಮೇ 8 ಮತ್ತು 9ರಂದು ಅಮೆರಿಕಕ್ಕೆ ತಲುಪಿದ ನಂತರ ಆಹಾರ ಹಾಗೂ ಸುರಕ್ಷತಾ ವಿಷಯಗಳನ್ನು ಪರಿಶೀಲಿಸಿ ಈ ಸರಕನ್ನು ಅಮೆರಿಕ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಹಡಗುಗಳಲ್ಲಿ ಸಾಗಿಸಿದ 15ರಿಂದ 17 ಟನ್‌ಗಳಷ್ಟು ಮಾವಿನ ಹಣ್ಣುಗಳ ಸರಕು ತಿರಸ್ಕರಿಸಲಾಗಿದೆ. ಆದರೆ ಈ ಹಣ್ಣುಗಳನ್ನು ಭಾರತಕ್ಕೆ ವಾಪಸ್ ತರುವುದರಿಂದ ಭಾರೀ ನಷ್ಟವಾಗುವ ಕಾರಣ ಅಲ್ಲೇ ನಾಶ ಮಾಡಲಾಗಿದೆ ಎಂದು ರಫ್ತುದಾರರು ವಿವರಿಸಿದ್ದಾರೆ.

S-karnataka Pg 08